**ದಿನಾಂಕಃ 26-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ಈ ದಿನ ನ್ಯಾಯಾಲಯದ ಮುಂದೆ ಇರುವ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ನಾನು ಆರೋಪಿತರನ್ನು ಗುರುತಿಸಿದ ಬಗ್ಗೆ ಪೋಲಿಸರಿಗೆ ಮರು ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಸಿ.ಬಿ.ಕೆ. ವಕೀಲರಿಂದಃ**

ನನಗೆ ಎರಡನೇ ಆರೋಪಿತನ ಬಗ್ಗೆ ವೈಯಕ್ತಿಕ ಮಾಹಿತಿ ಅಂದರೆ ಹೆಸರು ವಿಳಾಸ ಗೊತ್ತಿಲ್ಲ ಎಂದರೆ ನಿಜ. ಅವನು ಎನು ಕೆಲಸ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಿ ಪಿ -1 ದೂರಿನಲ್ಲಿ ಬರೆದಿರುವ ವಿಚಾರಗಳು ಗೊತ್ತಿದೆಯಾ ಎಂದರೆ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ನಾನುಸುಮಾರು 10 ವರ್ಷಗಳಿಂದ ಕುರಿ ಸಾಕಾಣಿಕೆ ಮಾಡುತ್ತಿದ್ದೇನೆ. ಕುರಿ ಕಳುವು ಆಯಿತುಎಂದು ಹೇಳುವ ದಿವಸ ನನ್ನ ಮನೆಯಲ್ಲಿ ಎಷ್ಟು ಕುರಿಗಳು ಇತ್ತು ಎಂದರೆ 2 ಕುರಿಗಳು ಇದ್ದವು. ನನ್ನ ಹತ್ತಿರ ಎರಡು ಕುರಿಗಳು ಇತ್ತು ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಇಲ್ಲ. ಆ ಕುರಿಗಳ ಪೋಟೋ ಇದೆಯಾ ಎಂದರೆ ಇಲ್ಲ. ಪೋಲಿಸರು ನನ್ನ ಮನೆಗೆ ಯಾವ ದಿನಾಂಕ ಬಂದಿದ್ದರು ಎಂದರೆ ನನಗೆ ದಿನಾಂಕ ಗೊತ್ತಿಲ್ಲ. ನನಗೆ ಮನೆಗೆ ಬಂದಿದ್ದ ಪೋಲಿಸರ ಹೆಸರು, ವಿಳಾಸ ಗೊತ್ತಿದೆಯಾ ಎಂದರೆ ಇಲ್ಲ. ನನ್ನ ಮನೆಯಲ್ಲಿ ಯಾವುದೇ ಕುರಿ ಕಳ್ಳತನ ಆಗಿಲ್ಲ ನಾನು ಪೋಲಿಸರಿಗೆ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನನ್ನ ಮನೆಯಲ್ಲಿ ಕುರಿಗಳು ಇರಲಿಲ್ಲ ಎಂದರೆ ಸರಿಯಲ್ಲ.

2. ನಾನು ಆರೋಪಿತನನ್ನು ಸ್ಥಳದಲ್ಲಿ ಹಿಡಿದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು ಹಿಡಿದ ಕಾಲಕ್ಕೆ ಪೋಟೋ ತೆಗೆದಿದ್ದೀರಾ ಎಂದರೆ ಇಲ್ಲ. ಪೋಟೋ ತೆಗೆಯಲು ತೊಂದರೆ ಇತ್ತೇ ಎಂದರೆ ಇಲ್ಲ. ಸ್ಥಳದಲ್ಲಿ ಬಿಟ್ಟು ಹೋಗಿದ್ದ ಬೈಕು ನಂಬರು ಎನು ಎಂದರೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಆರೋಪಿತರಿಂದ ಪೋಲಿಸರು ಎನಾದರೂ ಅಮಾನತುಪಡಿಸಿಕೊಂಡಿದ್ದಾರೆಯೇ ಎಂದರೆ ಇಲ್ಲ. ನಾನು ಹೇಳುವ ಪ್ರಕಾರ ಯಾವುದೇ ಘಟನೆ ಆಗಿಲ್ಲ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ -2 ರಿಂದ 5 ಪೋಟೋಗಳನ್ನು ಯಾವ ಉದ್ದೇಶಕ್ಕಾಗಿ ತೆಗೆದಿದ್ದಾರೆ ಎಂದು ನಿನಗೆ ಗೊತ್ತಿದೆಯಾ ಎಂದರೆ ಇಲ್ಲ.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಎಸ್.ಎನ್.ಕೆ. ವಕೀಲರಿಂದಃ**

ನಿ ಪಿ -1 ದೂರನ್ನು ಯಾರು ಬರೆದರು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ನಿಜ. 3 ನೇ ಆರೋಪಿ ಪರಶುರಾಮ ಸ್ಥಳದಲ್ಲಿ ಇರಲಿಲ್ಲ ಎಂದರೆ ಆತನ ಹೆಸರು ನನಗೆ ಗೊತ್ತಿಲ್ಲ. ಮೇಲೆ ಮಾಡಿರುವ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಅಳವಡಿಸಿಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

(ಬಿ.ಸಿದ್ಧರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.